
## ಪ್ರಶ್ನಿಸುವ ವಿಷಯವೇ ಅಲ್ಲ

ನಮ್ಮ ಸಮಾಜದಲ್ಲಿ ಪಿತೃಪ್ರಧಾನ ಕುಟುಂಬ ವ್ಯವಸ್ಥೆಯಿದೆ. ಹೆಣ್ಣು ಎನ್ನುವ ಕಾರಣಕ್ಕೆ ಎದುರಾಗುವ ಕೆಲವು ತರತಮಗಳು, ಸಂಪ್ರದಾಯಗಳು ಅವಳನ್ನು ರಕ್ಷಿಸಬೇಕು ಎಂಬ ವಿಚಾರಕ್ಕೆ ಒತ್ತುಕೊಟ್ಟು ಹುಟ್ಟಿಕೊಂಡಿರುವಂತೆ ಕಾಣುತ್ತವೆ. ನಮ್ಮ ಇತಿಹಾಸವನ್ನೇ ಪುನರವಲೋಕನ ಮಾಡಿದಾಗ, ಸತಿ ಸಹಗಮನ ಪದ್ಧತಿ, ಚಿಕ್ಕವಯಸ್ಸಿಗೇ ಮಾಡುತ್ತಿದ್ದ ಮದುವೆ, ವಿಧವೆಯರನ್ನು ವಿರೂಪಗೊಳಿಸುತ್ತಿದ್ದದ್ದು ಇವೆಲ್ಲಾ ಕಾಲಾನಂತರದಲ್ಲಿ ಬದಲಾಗಿವೆ. ಅಂದರೆ ಒಂದು ಕಾಲದ ಸಂಪ್ರದಾಯ, ಪದ್ಧತಿ, ಅದರ ಮುಂದಿನ ಪೀಳಿಗೆಗೆ ಪ್ರಶ್ನಾರ್ಹವಾಗಿದೆ ಮತ್ತು ಅರ್ಥಹೀನವಾಗಿ ಕಂಡದ್ದು ಬದಲಾಗಿದೆ.

ಚಿಕ್ಕಂದಿನಲ್ಲಿ ನಮಗೇ ತಿಳಿಯದಂತೆ ಸಂಪ್ರದಾಯದ ಬೇರುಗಳು ನಮ್ಮ ಮನಸ್ಸಿನಲ್ಲಿ ಆಳವಾಗಿ ಇಳಿದಿರುತ್ತವೆ. ಹೀಗಾಗಿ ಸಂಪ್ರದಾಯವನ್ನು ಪ್ರಶ್ನಿಸಿ, ಅದಕ್ಕೆ ವಿರುದ್ಧವಾಗಿ ಹೋಗುವವರು, ಸಮಾಜದ ವಿರೋಧ ಎದುರಿಸಬೇಕಾದದ್ದು ಅನಿವಾರ್ಯ. ನಾವು ನಮ್ಮ ನಿರ್ಧಾರದಲ್ಲಿ ದೃಢವಾಗಿದ್ದರೆ, ನಾವು ಅಂದುಕೊಂಡಿದ್ದನ್ನು ಖಂಡಿತಾ ನಾವು ಸಾಧಿಸಲು ಸಾಧ್ಯ. ಹೆಣ್ಣುಮಕ್ಕಳು ಹೆತ್ತವರ ಅಂತ್ಯಸಂಸ್ಕಾರವನ್ನೂ ಮಾಡಲು ಸಾಧ್ಯ, ಮಾಡಬೇಕು ಕೂಡ.

ಇಲ್ಲಿ ನಾನು ಇನ್ನೊಂದು ವಿಚಾರವನ್ನು ಹಂಚಿಕೊಳ್ಳಲು ಇಷ್ಟಪಡುತ್ತೇನೆ. ನಾವು ಸಮಯ, ಸಂದರ್ಭಗಳನ್ನು ಅರ್ಥಮಾಡಿಕೊಳ್ಳುವಷ್ಟು ಪ್ರಬುದ್ಧರಾಗುತ್ತಾ ಹೋದಂತೆ, ನಮ್ಮ ವಿಚಾರ ಸರಣಿ ಬದಲಾಗುತ್ತದೆ. ಕಾಲಧರ್ಮಕ್ಕೆ ತಕ್ಕಂತೆ ಪ್ರತಿಯೊಂದು ಸಂಪ್ರದಾಯ, ಪದ್ಧತಿ ಉದಾರವಾಗುತ್ತದೆ, ಬದಲಾವಣೆಗಳನ್ನು ಒಪ್ಪಿಕೊಳ್ಳುತ್ತದೆ. ನಾವೇ ಕಂಡಂತೆ ಹೆಣ್ಣುಮಕ್ಕಳು ಕೆಲಸಕ್ಕೆ ಹೋಗುವುದು, ವಿಧವಾ ವಿವಾಹ, ಅಂತರ್ಜಾತೀಯ ವಿವಾಹಗಳನ್ನು ನಾವು ಒಪ್ಪಿಕೊಂಡಿದ್ದೇವೆ, ಸ್ವಾಗತಿಸಿದ್ದೇವೆ. ಹಾಗೆಯೇ ಅಪ್ಪ, ಅಮ್ಮನ ಅಂತ್ಯಸಂಸ್ಕಾರವನ್ನು ಹೆಣ್ಣುಮಕ್ಕಳು ಮಾಡುವುದು ಕೂಡ. ಹೆಣ್ಣುಮಕ್ಕಳು ಅಪ್ಪ ಅಮ್ಮನ ಜವಾಬ್ದಾರಿಯನ್ನು ವಹಿಸಿಕೊಂಡು, ಅವರ ಆರೋಗ್ಯ ಕಾಳಜಿ, ಸೇವೆ ಎಲ್ಲವನ್ನೂ ಮಾಡುವಾಗ ಇದು ಪ್ರಶ್ನಿಸಬೇಕಾದ ವಿಷಯವೇ ಅಲ್ಲ.

—ಬಿ.ವಿ. ರಾಜಲಕ್ಷ್ಮಿ, ಬೆಂಗಳೂರು



## ‘ಹೆಗಲಿನ ಭಾರ’ ಇಳಿಸೋಣ

‘ಋತುಚಕ್ರ’ ಮತ್ತು ‘ಸಂತಾನೋತ್ಪತ್ತಿ’ಯಂತಹ ಹೆಣ್ಣಿನ ಜೈವಿಕ ಲಕ್ಷಣಗಳನ್ನು ವಿಶೇಷಭಾವದಿಂದ ಕಂಡು ಅವಳನ್ನು ಹಲವು ಕೌಟುಂಬಿಕ ಜವಾಬ್ದಾರಿಗಳಿಂದ ದೂರ ಇರಿಸಲಾಯಿತು. ಇದೇ, ಕಾಲಕ್ರಮೇಣ ಅವಳನ್ನು ದುರ್ಬಲತೆಯ ಸ್ಥಾನದಲ್ಲಿ ನಿಲ್ಲಿಸಿ, ಕೌಟುಂಬಿಕ ಅಧಿಕಾರ ವ್ಯಾಪ್ತಿಯಿಂದ ದೂರ ತಳ್ಳಿತು. ಅವಳ ಜೈವಿಕತೆ ದುರ್ಬಲತೆಯಾಗಿ, ಅವಳ ಮಾನಸಿಕತೆ ಭಾವುಕ ನೆಲೆಯಲ್ಲಿ ಪರಿಗಣಿಸಲ್ಪಟ್ಟಿತು. ಹೆತ್ತವರ ಸಾವು ಮತ್ತು ಅಂತ್ಯಸಂಸ್ಕಾರದ ವಿಧಿವಿಧಾನಗಳು ಹೆಣ್ಣನ್ನು ದೈಹಿಕವಾಗಿ, ಮಾನಸಿಕವಾಗಿ ಗಾಸಿಗೊಳಿಸುತ್ತವೆ ಎಂಬ ಭಾವನೆ ಬೆಳೆಯಿತು. ಮುಂದೆ ಧರ್ಮಶಾಸ್ತ್ರಗಳು ಮಧ್ಯ ಪ್ರವೇಶಿಸಿ ನೂರು ನೆಪ ಹೇಳಿ ಗಂಡಸಿನ ‘ಹೆಗಲಿಗೆ’ ಜವಾಬ್ದಾರಿ ಹೊರಿಸಿದವು.

ಹೆತ್ತವರ ಸಾವು ಗಂಡಿಗಾಗಲಿ ಹೆಣ್ಣಿಗಾಗಲಿ ದುಃಖ ತರಿಸುವ ಸನ್ನಿವೇಶ. ಅದೇಕೋ ಸಮಾಜ ದುಃಖದ ವಿಚಾರದಲ್ಲಿ ಹೆಣ್ಣಿಗೆ ಜಾಸ್ತಿ ಅಧಿಕಾರ ನೀಡಿದೆ. ಹೆತ್ತವರು ತೀರಿದಾಗ ಗಂಡುಮಕ್ಕಳೇನಾದರೂ ಅತ್ತರೆ ‘ಏನಪ್ಪ ಹೆಣ್ಮಕ್ಳು ಥರ ಅಳ್ತಿಯ’ ಅಂತಾರೆ. ಸಮಾಜದಲ್ಲಿ ಗಂಡಸು ಅಳುವುದು, ಹೆಂಗಸು ನಗುವುದು ಒಂದು ವಿರುದ್ಧಕ್ರಿಯೆ; ಹೀಗಾಗಿ ಪಾಪ ಗಂಡ್ಮಕ್ಕಿಗೆ ಅಳುವ ಭಾಗ್ಯವೂ ಇಲ್ಲ. ಹೆತ್ತವರು ತೀರಿದಾಗ ಅವರ ಹೃದಯವನ್ನು ಕಲ್ಲು ಮಾಡಿಕೊಂಡು, ಕೇಶ ಮುಂಡನ, ಉಪವಾಸ, ಒದ್ದೆ ಬಟ್ಟೆಯಲ್ಲಿ ಅಂತಿಮ ಕಾರ್ಯಗಳನ್ನು ನೆರವೇರಿಸಬೇಕು.

ಪಾಪ, ನಮ್ ಗಂಡ್ಮಕ್ಳು ಶತಶತಮಾನಗಳಿಂದ ಹೆತ್ತವರ ಅಂತ್ಯಸಂಸ್ಕಾರದ ಹೊಣೆ ಹೊತ್ಕೊಂಡು ಇಷ್ಟೆಲ್ಲಾ ಕಷ್ಟಪಡ್ತಿದ್ದಾರೆ!. ನಾವ್ ಹೆಣ್ಮಕ್ಳು ಹೊಣೆ ಹೊತ್ಕೊಂಡು ಅವರ ಹೆಗಲಿನ ಭಾರ ಇಳಿಸೋಣ... ಗಂಡುಹೆಣ್ಣು ಇಬ್ಬರೂ ಕೂಡಿಯೇ ಸಮಾಜ ನಿರ್ಮಿತ ಅಸಹಜ ಕಟ್ಟಳೆಗಳನ್ನು ತಿರಸ್ಕರಿಸಿ ಸಮಾನತೆ, ಸಹಬಾಳ್ವೆ, ಸ್ವಾತಂತ್ರ್ಯ ಉಳಿಸಿಕೊಂಡು ಹೋಗುವಂತಾಗಬೇಕು. ಈ ನಿಟ್ಟಿನಲ್ಲಿ ಹೆತ್ತವರ ಅಂತ್ಯಸಂಸ್ಕಾರ ಮಾಡುವ ಹೆಣ್ಣಿನ ಹಕ್ಕನ್ನು ಸಮಾಜ ಅವಳಿಗೆ ನೀಡಬೇಕು.

—ಸುಷ್ಮಿತಾ ವೈ.

## ಗಂಡು ಹೆಣ್ಣೆಂಬ ಭೇದ ಬೇಕೆ?

ಹಿಂದೆಯಿದ್ದ ಅದೆಷ್ಟೋ ಸಂಪ್ರದಾಯಗಳು ಇಂದು ಕಣ್ಮರೆಯಾಗಿವೆ. ನಾಗರಿಕತೆ, ಆಧುನಿಕತೆ ಬೆಳೆದಂತೆ ವಿದ್ಯಾವಂತರಾಗುತ್ತಾ ಜೀವನದ ಹಾದಿಯನ್ನು ಸುಲಲಿತಗೊಳಿಸಿಕೊಳ್ಳುತ್ತಾ ಸಾಗುವುದು ಮನುಷ್ಯನ ಸ್ವಭಾವ. ನಮ್ಮ ಜೀವನ ಹೀಗೇ ಇರಬೇಕೆಂದು ರೂಪಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಮುಲಾಜಿಗೆ ಅವಕಾಶವಿಲ್ಲದೆ ಯುವಪೀಳಿಗೆ ಮುಂದುವರೆಯುತ್ತಿರುವುದು ಅತ್ಯಂತ ಸೂಕ್ತ. ಗಂಡುಮಕ್ಕಳೇ ಕ್ರಿಯಾಕರ್ಮಗಳನ್ನು ಮಾಡುವ ಬಗ್ಗೆ ಏನಾದರೂ ವೈಜ್ಞಾನಿಕವಾಗಿ ಕಾರಣಗಳಿವೆಯಾ? ಎಂಬುವುದರ ಬಗ್ಗೆ ಮಾಹಿತಿಯಿಲ್ಲದಿರುವ ಕಾರಣ, ಹೆಣ್ಣುಮಕ್ಕಳು ಮಾತ್ರ ಇದ್ದರೆ ಇದು ಅವಶ್ಯಕ ಎನಿಸುತ್ತದೆ. ಈ ಕ್ರಿಯೆ ಸೂಕ್ಷ್ಮ ವಿಚಾರವಾಗಿದ್ದು, ಸ್ವಾಭಾವಿಕವಾಗಿ ನವಿರು ಮನಸ್ಸನ್ನು ಹೊಂದಿದ ಹೆಣ್ಣುಮಕ್ಕಳಿಗೆ ಗಾಸಿಯಾಗಬಹುದೆಂಬ ಕಾರಣಕ್ಕೆ ಗಂಡುಮಕ್ಕಳಿಗೆ ವಹಿಸಿರಬಹುದು. ಈಗ ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆ ತನ್ನ ಜವಾಬ್ದಾರಿಗಳನ್ನು ನಿಭಾಯಿಸುತ್ತಿರುವಾಗ ಕ್ರಿಯಾಕರ್ಮಗಳ ವಿಷಯದಲ್ಲಿಯೂ ಅನ್ವಯಿಸುತ್ತದೆ.

ಜೀವನ ಪಯಣದಲ್ಲಿ ಹೆಣ್ಣು ಗಂಡಿನಂತೆ ಕಾರ್ಯನಿರ್ವಹಿಸುವುದೂ, ಗಂಡಾದರೂ ಹೆಣ್ಣಾಗಿ ಮಿಡಿಯುವ ಸಂದರ್ಭಗಳೂ ಅನೇಕ. ಜೈವಿಕವಾಗಿ ಮಾತ್ರ ಗಂಡು ಹೆಣ್ಣೆಂಬ ವಿಧಗಳಿವೆ. ಬದಲಾವಣೆಯೊಂದಿಗೆ ಸಾಗುತ್ತಾ ಅಭಿವೃದ್ಧಿಯ ಮಾರ್ಗದಲ್ಲಿ ಅತ್ಯುತ್ತಮವಾಗಿ ಬದುಕುವುದೇ ಶ್ರೇಷ್ಠವಾದುದು.

—ಕೆ. ನಿರ್ಮಲ ಮರಡಿಹಳ್ಳಿ, ಚಿತ್ರದುರ್ಗ